ಕವಿತೆ





**ನೂತನ ದೋಶೆಟ್ಟಿ**

ಕಲೆ: ರೂಪಶ್ರೀ ಕಲ್ಲಿಗನೂರು

# ವಿಂಗಡಿಸಿ ನೋಡು

ಹೀಗೆ ಹೇಳುವವರು ಕಸ ಗುಡಿಸುವವರು
ಹಸಿ ಬೇರೆ, ಒಣ ಬೇರೆ
ಮಾಡಿದರೆ
ನೆಲಕ್ಕೆ ಹಸಿರು
ಗಾಳಿಗೆ ಉಸಿರು
ಆಗ್ರಹವೇನಿದ್ದರೂ ಗಾಡಿ ತುಂಬುವವರೆಗೆ
ಊರ ಹೊರಗೆ ಚೆಲ್ಲುವವರೆಗೆ

* * *

ವಿಂಗಡಿಸದಿರಿ ಒಂದಾಗಿರಿ
ಹೇಳುವವರು ಉಳಿದ ಎಲ್ಲರೂ
ಅರಚಿ ಗಂಟಲು ಆರುವವರೆಗೆ
ಒಡೆದು ಹೋಳಾಗುವವರೆಗೆ.
ವಿಂಗಡಿಸುವುದು ಮರ್ಮ
ಒಡೆಯುವುದು ಧರ್ಮ
ಕೆಡಹುವುದೇ ಕರ್ಮ
ಇದೀಗ ಧರ್ಮಕರ್ಮಗಳಿಗೆ ಪಂದ್ಯವಂತೆ
ವಿಂಗಡಿಸಿ ಆಡಿಸುತ್ತ
ಮುರಿದು ಮುಕ್ಕಾಗಿಸುತ್ತ
ಕೆರಳಿಸಿ ಕನಲಿಸುತ್ತ
ಬೆಂದ ಬೇಳೆಯ ಹಿಚುಕಿ ನೋಡುತ್ತ
ತುಂಬುವ ಥೈಲಿಯ ಮೇಲೆ ಕೈಯಾಡಿಸುತ್ತ
ಗೆಲುವಲ್ಲದ ಸೋಲೊಲ್ಲದ
ವಿಕ್ಷಿಪ್ತ ಓಲಾಟವಂತೆ

* * *

ಕೆಡುಕನ್ನು ವಿಂಗಡಿಸಿ
ಒಳಿತನ್ನು ಕೂಡಿಸುವುದು
ಜಾಯಮಾನ
ಕಸವೀಗ ಕೆಡುಕಲ್ಲ
ಆದರೂ ವಿಂಗಡಿಸಬೇಕು ಒಳಿತಿಗೆ
ಧರ್ಮ ಕರ್ಮಗಳು ಒಳಿತ ಸೋಗ ಮೀರಿಲ್ಲ
ಆದರೂ ಕೂಡಿಸಬೇಕು ಒಳಿತಿಗೆ
ವಿಂಗಡಿಸುವುದೂ ಧರ್ಮ
ಕೂಡಿಸುವುದೂ ಧರ್ಮ
ಬೇಕಾದವರಿಗೆ, ಬೇಕಾದಷ್ಟು, ಬೇಕಾದಂತೆ.